3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ
ನ್ಯಾಯಾಲಯ, ಚನ್ನರಾಯಪಟ್ಟಣ

**CC 1288/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಮೋಹನ್ | **C.W –4** |
| ತಂದೆಯ ಹೆಸರು | ಃ | ಈರಯ್ಯ | **P.W –4** |
| ವಯಸ್ಸು | ಃ | 45 ವರ್ಷ | |
| ಉದ್ಯೋಗ | ಃ | ಆಟೋ ಚಾಲಕ | **ಪ್ರಮಾಣ ವಚನ ಬೋಧಿಸಲಾಯಿತು.** |
| ವಾಸ | ಃ | ಹಿರಿಸಾವೆ | ದಿನಾಂಕಃ **18.11.2023** |

---

<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ</u>

ಚಾ ಸಾ 1 ರಿಂದ 3 ಮತ್ತು 5 ರವರ ಪರಿಚಯವಿದೆ.

ಸಾಕ್ಷಿಗೆ ಕೃತ್ಯ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ ಪಿ 2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 2(ಬಿ) ಎಂದು ಗುರುತಿಸಲಾಯಿತು.

ದಿನಾಂಕ 20.06.2020 ರಂದು ಮಟ್ಟನವಿಲೆ ಮಾದಹಳ್ಳಿ ಮಧ್ಯಭಾಗದಲ್ಲಿ ಪೋಲೀಸರು ಸಂಜೆ 04.00 – 04.15 ರವರೆಗೆ ಮಹಜರ್ ಕ್ರಮ ಜರುಗಿಸಿದ್ದು ಆ ಸಮಯದಲ್ಲಿ ನಾನು ನಿ ಪಿ 2 ಕ್ಕೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು, ಚಾ ಸಾ 1 ಮತ್ತು 5 ರವರು ಹಾಜರಿದ್ದೆವು.

ಸಾಕ್ಷಿಗೆ ಅಮಾನತ್ತು ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ ಪಿ 3 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 3(ಬಿ) ಎಂದು ಗುರುತಿಸಲಾಯಿತು.

ದಿನಾಂಕ 28.06.2020 ರಂದು ಹಿರಿಸಾವೆ ಪೋಲೀಸ್ ಠಾಣೆಯಲ್ಲಿ ಪೋಲೀಸರು ಮೊಬೈಲ್ ಮತ್ತು ಸಿ ಡಿ ಯನ್ನು ಸುಮಾರು 05.00-06.00 ಗಂಟೆವರೆಗೆ ಅಮಾನತ್ತುಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ನಾನು, ಚಾ ಸಾ 1 ಮತ್ತು 5 ರವರು ಹಾಜರಿದ್ದೆವು.

ಪೋಲೀಸರು ಅಮಾನತ್ತುಪಡಿಸಿಕೊಂಡ ಫೋನ್ ಮತ್ತು ಸಿ ಡಿ ಡಿಸ್ಕ್‌ನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ ಒ 1 ಮತ್ತು 2 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕ 28.06.2020ರಂದು ಚನ್ನರಾಯಪಟ್ಟಣ ತಾಲ್ಲೂಕು, ಎಸ್ ಬೆಳಗೊಳ ಹೋಬಳಿ, ಮಟ್ಟನವಿಲೆ ಗ್ರಾಮದ ನಾಗರತ್ನ ಅವರ ಜಮೀನಿನ ಮುಂದೆ ಪೂರ್ವ–ಪಶ್ಚಿಮವಾಗಿ ಹಾದುಹೋಗಿರುವ ಎನ್‌ಹೆಚ್ 75 ಹಾಸನ ಕಡೆಯಿಂದ ಬೆಂಗಳೂರು ಕಡೆಗೆ ಹೋಗುವ ಸರ್ವೀಸ್ ರಸ್ತೆಯ ಪಕ್ಕದ ಖಾಲಿ ಜಾಗದಲ್ಲಿ ಪೋಲೀಸರು ಮಹಜರ್ ಕ್ರಮ ಜರುಗಿಸಿದರು ಎಂದರೆ ಸರಿ.

**ಪಾಟೀ ಸವಾಲು** – ಶ್ರೀ ಡಿ ಕೆ ಎಂ ಆರೋಪಿ ಪರ ವಕೀಲರಿಂದ

ಚಾ ಸಾ 5ರವರು ಸುಮಾರು 20–30 ವರ್ಷಗಳಿಂದ ಪರಿಚಯ ಮತ್ತು ಸ್ನೇಹಿತರು . ಚಾ ಸಾ 1ರವರು ನನಗೆ ಪರಿಚಯ. ಚಾ ಸಾ 1ರವರ ಅಕ್ಕ–ತಂಗಿಯರು ಮತ್ತು ಅಣ್ಣ–ತಮ್ಮಂದಿರ ಪರಿಚಯವಿಲ್ಲ. ಯಾವ ವಿಚಾರವಾಗಿ ಪೋಲೀಸರು ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಚಾ ಸಾ 7ರವರು ನನ್ನನು ಮಹಜರ್ ಸ್ಥಳಕ್ಕೆ ಕರೆದುಕೊಂಡುಹೋಗಿರುತ್ತಾರೆ. ಚಾ ಸಾ 1, 5 ಮತ್ತು ನಾನು ಚಾ ಸಾ 7ರವರೊಂದಿಗೆ ಮಹಜರ್ ಸ್ಥಳಕ್ಕೆ ಇಲಾಖಾ ಜೀಪಿನಲ್ಲಿ ಹೋಗಿರುತ್ತೇವೆ. ಮುಖ್ಯ ರಸ್ತೆಗೆ ಸರ್ವೀಸ್ ರಸ್ತೆಯು ಹೊಂದಿಕೊಂಡಂತೆ ಇದೆ. ಮುಖ್ಯ ರಸ್ತೆ ಮತ್ತು ಸರ್ವೀಸ್ ರಸ್ತೆಯ ಮಧ್ಯದಲ್ಲಿ ಪಟ್ಟಿಯನ್ನು ಅಳವಡಿಸಿರುತ್ತಾರೆ ಎಂದರೆ ಸರಿ. ಚಾ ಸಾ 1ರವರು ಯಾವ ರಸ್ತೆಯಲ್ಲಿ ಚಲಿಸುತ್ತಿದ್ದೆ ಎಂದು ನನಗೆ ತಿಳಿಸಿಲ್ಲ . ಘಟನಾ ಸ್ಥಳವು ಹಿರಿಸಾವೆ ಪೋಲೀಸ್ ಠಾಣೆಯಿಂದ 6 ಕಿ.ಮಿ. ಅಂತರವಿದೆ. ಘಟನಾ ಸ್ಥಳದಿಂದ ಮಟ್ಟನವಿಲೆ ಅರ್ಧ ಕಿ.ಮಿ. ಇದೆ. ಘಟನಾ ಸ್ಥಳದ ಪೂರ್ವ–ಪಶ್ಚಿಮಕ್ಕೆ ಮತ್ತು ದಕ್ಷಿಣಕ್ಕೆ ಮುಖ್ಯ ರಸ್ತೆ ,

ಉತ್ತರಕ್ಕೆ ಜಮೀನು ಇದೆ. ಸರ್ವೀಸ್ ರಸ್ತೆಯಲ್ಲಿ ಪೋಲೀಸರು ಮಹಜರ್ ಕ್ರಮ ಜರುಗಿಸಿರುತ್ತಾರೆ. ನಿ ಪಿ *2* ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಿ ಪಿ *3* ರಲ್ಲಿರುವ ವಿಚಾರಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನಿ ಪಿ *2*ಕ್ಕೆ ಮೊದಲು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ನಂತರ ನಿ ಪಿ *2*ಕ್ಕೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ ಪಿ *2*ನ್ನು ಚಾ ಸಾ *7*ರವರು ಬರೆದಿರುತ್ತಾರೆ. ಮೊದಲು ಕೃತ್ಯ ಸ್ಥಳಕ್ಕೆ ಭೇಟಿ ನೀಡಿರುತ್ತೇವೆ. ಸರ್ವೀಸ್ ರಸ್ತೆಯ ಅಕ್ಕ-ಪಕ್ಕದ ಮನೆಯವರನ್ನು ಪೋಲೀಸರು ವಿಚಾರಿಸಿಲ್ಲ. ಪೋಲೀಸ್ ಠಾಣೆಗೆ ಇಲಾಖಾ ಜೀಪಿನಲ್ಲಿ ಹೋಗಿರುತ್ತೇವೆ. ಎಂ ಒ *2*ನ್ನು ಯಾರು ಎಲ್ಲಿ ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಎಂ ಒ *1* ಯಾವ ಕಂಪನಿಯ ಮೊಬೈಲ್ ಎಂದು ನನಗೆ ಗೊತ್ತಿಲ್ಲ. ಪೋಲೀಸ್ ಠಾಣೆಗೆ ಹೋದಾಗ ಎಂ ಒ *1* ಚಾ ಸಾ *1*ರವರ ಕೈಯಲ್ಲಿ ಇರಲಿಲ್ಲ. ಎಂ ಒ *1* ಮತ್ತು *2*ನ್ನು ಪೋಲೀಸರಿಗೆ ಯಾರು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ನಿ ಪಿ *3*ಕ್ಕೆ ಯಾರು ಮೊದಲು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ ಪಿ *3*ನ್ನು ಟೈಪ್ ಮಾಡಿಸಿರುತ್ತಾರೆ. ನಿ ಪಿ *3*ನ್ನು ಯಾರು ಟೈಪ್ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಕೃತ್ಯ ಸ್ಥಳಕ್ಕೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ನಿ ಪಿ *2* ಮತ್ತು *3*ನ್ನು ಪೋಲೀಸ್ ಠಾಣೆಯಲ್ಲಿ ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಚಾ ಸಾ *1*ರವರು ನನ್ನ ಸ್ನೇಹಿತರಾಗಿದ್ದು ಚಾ ಸಾ *1*ರವರಿಗೆ ಸಹಾಯವಾಗಲೆಂಬ ಉದ್ದೇಶದಿಂದ ನಾನು ನಿ ಪಿ *2* ಮತ್ತು *3*ಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಯಾರ ವಿರುದ್ಧ ಪ್ರಕರಣ ದಾಖಲು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಚನ್ನರಾಯಪಟ್ಟಣ